| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 223-2017**

**ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 13**

ಸಾಕ್ಷಿದಾರನ ಹೆಸರು : ಅಶೋಕ ಆಚಾರ್ಯ
ತಂದೆಯ ಹೆಸರು : ಗೋಪಾಲ ಆಚಾರ್ಯ
ಪ್ರಾಯ : 38 ವರ್ಷ
ಉದ್ಯೋಗ : ಚಿನ್ನದ ಕೆಲಸ
ವಾಸ : ಆನೆಕೆರೆ

ದಿನಾಂಕ **12.10.2021** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುತ್ತೇನೆ. ದಿಃ 14-12-2016 ರಂದು ಪೋಲಿಸರು ನನಗೆ ದೂರವಾಣಿ ಕರೆ ಮಾಡಿ ಕಳುವು ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಪರಿಶೀಲಿಸಲು ಪೋಲಿಸ್ ಠಾಣೆಗೆ ಬರಲು ಹೇಳಿದ್ದು, ನಾನು ಪೋಲಿಸ್ ಠಾಣೆಗೆ ಹೋಗಿದ್ದು, ಪೋಲಿಸರು ಅಲ್ಲಿಂದ ನನ್ನನ್ನು ಮತ್ತು ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಕರೆದುಕೊಂಡು ಮೂಡುಬಿದ್ರೆಯ ಸುಧಾ ಜ್ಯುವೆಲ್ಲರ್ಸ್ ಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಆರೋಪಿಯು ಬೆಳ್ಳಿಯ ವಸ್ತುಗಳನ್ನು ಕೊಟ್ಟಿರುವುದಾಗಿ ಹೇಳಿದ್ದು, ಅವುಗಳನ್ನು ಹಾಜರುಪಡಿಸಲು ಹೇಳಿದ್ದು, ಸುಧಾ ಜ್ಯುವೆಲ್ಲರ್ಸ್ ಮಾಲೀಕರಾದ ಚಾಸಾ 12 ರವರು 2 ಬೆಳ್ಳಿಯ ಕಾಲುಚೈನುಗಳನ್ನು, ಸೊಂಟದ 2 ಉಡಿದಾರ, ಬೆಳ್ಳಿಯ ಲೋಟ, ಬೆಳ್ಳಿಯ ತಗಡಿನ 2 ತುಂಡುಗಳನ್ನು, 2 ಬೆಳ್ಳಿಯ ಉಂಗುರಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ನಾನು ಸ್ಥಳದಲ್ಲಿ ಪರಿಶೀಲಿಸಿ ಅವು ಬೆಳ್ಳಿಯದ್ದು ಎಂದು ದೃಢೀಕರಿಸಿರುತ್ತೇನೆ ಮತ್ತು ಅವುಗಳನ್ನು ತೂಕ ಮಾಡಿ ತಿಳಿಸಿರುತ್ತೇನೆ. ಪೋಲಿಸರು ಮಹಜರು ಮುಖೇನ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ-6 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

2. ಅದೇ ದಿನ ಪೋಲಿಸರು ಅಲ್ಲಿಂದ ಮಂಗಳೂರಿನ ಹಂಪನಕಟ್ಟೆಯ ವಿ ಆರ್ ಎಸ್ ಫೈನಾನ್ಸ್ ಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಚಾಸಾ 11 ಮ್ಯಾನೇಜರ್ ಸುಧಾಕರ ಆಚಾರ್ಯ ಇದ್ದು, ಅಲ್ಲಿ ಆರೋಪಿ ಚಿನ್ನವನ್ನು ಅಡವು ಇಟ್ಟಿರುವುದಾಗಿ ಹೇಳಿದ್ದು, ಒಂಭತ್ತು ಚಿನ್ನದ ಉಂಗುರಗಳು, ಮೂಗುತಿ, ಹವಳದ ಸರ, ಚಿನ್ನದ ಸರ, ಒಟ್ಟು 19 ಚಿನ್ನದ ಐಟಮ್ ಗಳು ಇದ್ದು, ಅವುಗಳನ್ನು ಪರಿಶೀಲಿಸಿದಾಗ ಅವು ಚಿನ್ನದ ಒಡವೆಗಳು ಎಂದು ಕಂಡುಬಂತು ಮತ್ತು ಅವುಗಳನ್ನು ತೂಕ ಮಾಡಿರುತ್ತೇನೆ. ಸ್ಥಳದಲ್ಲಿ ಪೋಲಿಸರು ಮಹಜರು ಮಾಡಿ ನನ್ನ ಸಹಿ ಪಡೆದು ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಾನು ಪರಿಶೀಲಿಸಿದ ಬೆಳ್ಳಿ ಮತ್ತು ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು** ಃ ಆರೋಪಿ ಪರ ಃ ಶ್ರೀ ಕೆ ಬಿ ಎಸ್ ವಕೀಲರಿಂದ ಃ

**3.** ದಿಃ **14-12-2016** ರಂದು ಪೋಲಿಸರು ನನ್ನನ್ನು ಪೋಲಿಸ್ ಠಾಣೆಗೆ ಕರೆಯಿಸಿರುತ್ತಾರೆ. ಪೋಲಿಸರು ಪಂಚನಾಮೆಗೆ ಸಹಕರಿಸಲು ತಿಳಿಸಿರುತ್ತಾರೆ. ಆ ದಿನ ಪೋಲಿಸ್ ಠಾಣೆಗೆ ಹೋದಾಗ ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ಪ್ರಥಮ ಬಾರಿಗೆ ಪೋಲಿಸ್ ಠಾಣೆಯಲ್ಲಿ ಆರೋಪಿಯನ್ನು ನೋಡಿರುತ್ತೇನೆ. ನಾನು ಮೂಡುಬಿದ್ರೆಯ ಸುಧಾ ಜ್ಯುವೆಲ್ಲರ್ಸ್ ಗೆ ಪ್ರಥಮ ಬಾರಿಗೆ ಹೋಗಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ ಸುಧಾ ಜ್ಯುವೆಲ್ಲರ್ಸ್ ಮಾಲೀಕರನ್ನು ವಿಚಾರಿಸಿರುತ್ತಾರೆ. ಅಂಗಡಿಯ ಮಾಲೀಕತ್ವದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಅಲ್ಲಿ ಬೆಳಿಳ್ಳಯ ಆಭರಣಗಳನ್ನು ವಶಪಡಿಸಿಕೊಂಡಿರುತ್ತಾರೆ. ಆದರೆ ನಿಖರವಾಗಿ ಎಷ್ಟು ಬೆಳ್ಳಿಯ ಆಭರಣಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಈಗ ಹೇಳಲು ನೆನಪಿಲ್ಲ. ಪೋಲಿಸರು ಹೇಳಿದಂತೆ ಸದರಿ ಬೆಳ್ಳಿಯ ಆಭರಣಗಳನ್ನು ನಾನು ಪರಿಶೀಲಿಸಿರುತ್ತೇನೆ. ಆರೋಪಿ ಯಾವ ಸಮಯದಲ್ಲಿ ಎಷ್ಟು ಮೌಲ್ಯಕ್ಕೆ ಬೆಳ್ಳಿಯ ಆಭರಣಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಕಂಡುಬಂದಿರುವುದಿಲ್ಲ. ಆರೋಪಿಯು ಸದರಿ ಬೆಳ್ಳಿಯ ಆಭರಣಗಳನ್ನು ಮಾಾಟ ಮಾಡಿರುತ್ತಾರೆ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಬೆಳ್ಳಿಯ ಸ್ವತ್ತುಗಳಿಗೆ ಅಂಗಡಿಯ ಮಾಲೀಕರು ಆರೋಪಿಗೆ ಎಷ್ಟು ಹಣವನ್ನು ನೀಡಿದ್ದಾರೆ ಎಂದು ಗೊತ್ತಿರುವುದಿಲ್ಲ. ಅಂಗಡಿಯ ಡೋರ್ ನಂಬರ್ ನ್ನು

ಪಡೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಂಗಡಿಯ ಮಾಲೀಕರ ಪರವಾನಿಗೆ ಪತ್ರವನ್ನು ಪರಿಶೀಲಿಸಿದ ಬಗ್ಗೆ ನನಗೆ ಗೊತ್ತಿಲ್ಲ, ನಾವು ಅಂಗಡಿಗೆ ಹೋದಾಗ ಸುಮಾರು **1.00** ಗಂಟೆಯಾಗಿತ್ತು. ಆ ಸಮಯದಲ್ಲಿ ವ್ಯಾಪಾರ ನಡೆಯುತ್ತಿರಲಿಲ್ಲ. ಆ ಸಮಯದಲ್ಲಿ ಅಂಗಡಿಯಲ್ಲಿ ಕೆಲಸಗಾರರು ಇದ್ದರು. ಸ್ವತ್ತುಗಳನ್ನು ವಶಪಡಿಸಿಕೊಂಡ ಬಗ್ಗೆ, ದಾಖಲೆಗೆ ಸಹಿ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸ್ವತ್ತುಗಳನ್ನು ಪಡೆದುಕೊಂಡು ಮಂಗಳೂರಿಗೆ ಹೋಗಿರುತ್ತೇವೆ. ಆರೋಪಿಯ ಜೊತೆಗೆ ಸುಧಾ ಜ್ಯುವೆಲ್ಲರ್ಸ್ ಗೆ ಹೋಗಿದ್ದೇವೆಂದು, ಅದರ ಮಾಲೀಕರು ಬೆಳ್ಳಿಯ ಆಭರಣಗಳನ್ನು ಹಾಜರುಪಡಿಸಿರುತ್ತಾರೆಂದು ಹಾಗೂ ನಾನು ಅವುಗಳನ್ನು ಪರಿಶೀಲಿಸಿರುತ್ತೇನೆಂದರೆ ಸರಿಯಲ್ಲ. ಅಂಗಡಿಯ ಅಕ್ಕಪಕ್ಕದವರನ್ನು ಸಾಕ್ಷಿಯಾಗಿ ಕರೆದಿರುವುದಿಲ್ಲ. ನಾಲ್ಕು ಪ್ರಕರಣಗಳಲ್ಲಿ ನಾನೇ ಸಾಕ್ಷಿದಾರನಾಗಿರುತ್ತೇನೆ (ಅಪ್ರೈಸರ್) ಎಂದರೆ ಸರಿ. ಚಾಸಾ **9** ಮತ್ತು **10** ರವರು ಸಾಕ್ಷಿದಾರರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾಲ್ಕು ಪ್ರಕರಣ ಸಿಸಿ ನಂಃ **223/17, 397/17, 400/17, 399/17** ಗಳಲ್ಲಿ **1** ರಿಂದ **19** ಸ್ವತ್ತುಗಳನ್ನು ಒಂದೇ ಮಹಜರು ಮುಖಾಂತರ ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**4.** ಮಂಗಳೂರಿನ ವಿ ಆರ್ ಎಸ್ ಫೈನಾನ್ಸ್, ಮಾಲೀಕರು ಯಾರು ಎಂದರೆ ಚಾಸಾ **11** ರವರು. ಪೋಲಿಸರು ಹೇಳಿದ ಮಾತನ್ನು ಕೇಳಿಕೊಂಡು ಕಾರ್ಕಳ ಪೋಲಿಸ್ ಠಾಣೆಯಲ್ಲಿ ನಿಪಿ-**6** ಮತ್ತು **7** ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಸ್ ಐ ರವರ ಮಾತನ್ನು ಕೇಳಿಕೊಂಡು ಮಂಗಳೂರು ಮತ್ತು ಮೂಡುಬಿದ್ರೆಗೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಎಲ್ಲಾ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಸೃಷ್ಟೀಕರಿಸಿದ ಪ್ರಕರಣಗಳು ಎಂದರೆ ಸರಿಯಲ್ಲ. ಎಸ್ ಐ ರವರ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ